

# ಗಿನ್ನೆಸ್ ಕಣ್ರೆಪ್ಪೆ!

'ಚೆಲುವೆಯ ಅಂದದ ಮೊಗಕೆ ಕಣ್ಣೇ ಭೂಷಣ..' ಅಂದ ಹಾಗೆ ಕಣ್ಣು ಅಂದವಾಗಿ ಕಾಣಲು ಕಣ್ರೆಪ್ಪೆಯ ಕೂದಲು ಸಹ ಕಾರಣ. ಸಾಮಾನ್ಯವಾಗಿ ನಮ್ಮೆಲ್ಲರ ಕಣ್ರೆಪ್ಪೆ ಕೂದಲು 0.8 ರಿಂದ 1.2 ಸೆಂಟಿ ಮೀಟರ್ ನಷ್ಟು ಉದ್ದವಾಗಿರುತ್ತದೆ. ಆದರೆ ಯು ಜಿಯಾನ್ಕ್ಸಿಯಾಳ ಕಣ್ರೆಪ್ಪೆ ಕೂದಲನ್ನು ನೀವು ನಿಮ್ಮ ಕಣ್ಣು ರೆಪ್ಪೆ ಮಿಟುಕಿಸದೇ ನೋಡೋದು ಗ್ಯಾರಂಟಿ! ಯಾಕೆಂದ್ರೆ ಈಕೆಯ ರೆಪ್ಪೆ ಕೂದಲು ಬರೋಬ್ಬರಿ 12.4 ಸೆಂಟಿ ಮೀಟರ್ ಅಂದರೆ ಸುಮಾರು ಐದು ಇಂಚುಗಳಷ್ಟು ಉದ್ದವಿದೆ.

2018 ರ ಗಿನ್ನೆಸ್ ರೆಕಾರ್ಡ್‌ನಲ್ಲಿ ಪ್ರಪಂಚದಲ್ಲೇ ಅತೀ ಉದ್ದನೆಯ ಕಣ್ರೆಪ್ಪೆ ಕೂದಲು ವಿಭಾಗವಂತೂ ಭಾರೀ ಫೇಮಸ್ಸು. ವಿಶ್ವದ ಎಲ್ಲಾ ಕಡೆಯಿಂದಲೂ ಈ ವಿಭಾಗಕ್ಕೆ ಬಂದಿದ್ದು ಸುಮಾರು 500 ಪ್ರವೇಶಗಳು. ಆದರೆ ಯಾರೂ ಯು ಜಿಯಾನ್ಕ್ಸಿಯಾಳ ಹತ್ತಿರಕ್ಕೂ ಬರಲಾಗಲಿಲ್ಲ! ಚೀನಾದ ಶಾಂಘೈನಲ್ಲಿ ಮೊದಲು ಇನ್ವೆಸ್ಟ್ ಮೆಂಟ್ ಫಂಡ್ ನ ಮಾಜಿ ನಿರ್ದೇಶಕಿಯಾಗಿದ್ದ ಈಕೆಯ ಕಣ್ರೆಪ್ಪೆ ಕೂದಲು ಬಾಯಿಯನ್ನು ದಾಟಿ ಕೆಳಗಿದೆ. ಆದ್ದರಿಂದ 49 ವರ್ಷ ವಯಸ್ಸಿನ ಜಿಯಾನ್ಕ್ಸಿಯಾ ಬಲು ಸುಲಭವಾಗಿ ಗಿನ್ನೆಸ್ ದಾಖಲೆಯ ಕಿರೀಟವನ್ನು ತನ್ನ ಮುಡಿಗೇರಿಸಿಕೊಂಡಿದ್ದಾಳೆ. ಕಳೆದ ವರ್ಷ ಜೂನ್ 28 ರಂದು ಈಕೆಯ ರೆಪ್ಪೆ ಕೂದಲನ್ನು ಅಧಿಕೃತವಾಗಿ ಅಳತೆ ಮಾಡಿ ನೋಡಿದಾಗ ಎಡಗಣ್ಣಿನ ಮೇಲ್ರೆಪ್ಪೆಯ ಕೂದಲೊಂದು 12.4 ಸೆಂ.ಮೀ ನಷ್ಟು ಉದ್ದವಿರುವುದು ತಿಳಿದು ಬಂದಿದೆ. ಬಹುಶಃ ಇದು ಈಗ ಇನ್ನಷ್ಟು ಉದ್ದ ಬೆಳೆದಿರಬಹುದೇನೋ!

ಉದ್ದನೆಯ ರೆಪ್ಪೆ ಕೂದಲನ್ನು ಹೊಂದಿರುವುದಕ್ಕೆ ಹೆಮ್ಮೆ ಎನ್ನಿಸುತ್ತದೆ. ಇದು ಆರೋಗ್ಯ ಹಾಗೂ ಆಯುಸ್ಸಿನ ಸಂಕೇತವಾಗಿದೆ. ನನ್ನ ದೇಹದ ಅಂಗವೇ ಆಗಿರುವ ರೆಪ್ಪೆ ಕೂದಲನ್ನು ನಾನು ಜೋಪಾನ ವಾಗಿ ಕಾಪಾಡಿಕೊಳ್ಳುತ್ತೇನೆ. ಅವು ಅಪ್ಪಿ ತಪ್ಪಿ ಹಾಳಾಗದಂತೆ ಮುಖವನ್ನು ಮೃದುವಾಗಿ ತೊಳೆದುಕೊಳ್ಳುತ್ತೇನೆ ಎಂದು ಪತ್ರಿಕಾ ಸಂದರ್ಶನದಲ್ಲಿ ಜಿಯಾನ್ಕ್ಸಿಯಾಳು ನುಡಿದಿದ್ದಾಳೆ. ಕಳೆದೆರಡು ವರ್ಷಗಳ ಹಿಂದೆ ಕೀವ್ ದೇಶದವನೊಬ್ಬ 3 ಸೆಂ ಮೀ ಉದ್ದದ್ದ ಕಣ್ರೆಪ್ಪೆ ಕೂದಲನ್ನು ಹೊಂದಿದ್ದು, ಇದುವರೆಗಿನ ಗಿನ್ನೆಸ್ ವಿಶ್ವ ದಾಖಲೆಯಾಗಿತ್ತು.

■ ವಿದ್ಯಾ ವಿ. ಹಾಲಭಾವಿ



